# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಕೆ.ಆರ್.ಪುರ ಉಪ ವಲಯ, ಮಹದೇವಪುರ ವಲಯ, ಬೆಂಗಳೂರು-560036.

ಸಂಖ್ಯೆ.ಬಿಬಿಎಂಪಿ/ಸ.ಕಾ.ಅ/ಕೆ.ಆರ್.ಪಿ.ಉವ/ಪಿಆರ್/ /2022-23 ದಿನಾಂಕ: 04-02-2023

ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂ: ಬಿ12(5)/ಪಿಆರ್/35/2020-21 ದಿನಾಂಕ: 21-09-2020 ರಂತೆ ದಿನಾಂಕ: 04-02-2023 ರಂದು ಹೊಸ ವಾರ್ಡ್ ಸಂಖ್ಯೆ:86, ಕೆ.ಆರ್.ಪುರ ವಾರ್ಡ್ ಕಮಿಟಿ ಸಭೆಯನ್ನು ವಾರ್ಡ್ ಕಛೇರಿಯಲ್ಲಿ ನೋಡಲ್ ಅಧಿಕಾರಿಗಳು ಹಾಗೂ ಶ್ರೀ.ಸೋಮನಾಥ್ ಜಾದವ್, ಸಹಾಯಕ ಅಭಿಯಂತರರು ರವರ ಅಧ್ಯಕ್ಷತೆಯಲ್ಲಿ ನಡೆದಿರುವ ಸಭೆಯ ನಡುವಳಿಗಳು:

### "ಸಭೆಯಲ್ಲಿ ಚರ್ಚಿಸಲಾದ ವಿಷಯಗಳು"

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| 1 | ಬೆಸ್ಕಾಂ ಇಲಾಖೆಗೆ ಸಂಬಂಧಿಸಿದ ವಿಷಯ. | ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಹಾಗೂ ವಾರ್ಡ್ ಮಟ್ಟದ ಕಾರ್ಯದರ್ಶಿಗಳು ಸಭೆಯನ್ನು ಕುರಿತು ಮಾತನಾಡುತ್ತಾ, ಕೆ.ಆರ್.ಪುರ ಆಸ್ಪತ್ರೆ ಬಳಿ OFC ಕೇಬಲ್‌ಗಳನ್ನು ತೆರವುಗೊಳಿಸುವಂತೆ ಸಭೆಯಲ್ಲಿ ಹಾಜರಿದ್ದ ಸ್ಥಳೀಯ ಸಾರ್ವಜನಿಕರು ಕೋರಿದರು. ಈ ವಿಷಯದ ಕುರಿತು ಹಾಜರಿದ್ದ ಸದರಿ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳಲಾಗುವುದೆಂದು ಸಭೆಯಲ್ಲಿ ತಿಳಿಸಿದರು. |
| 2 | ಘನ ತ್ಯಾಜ್ಯ ನಿರ್ವಹಣಾ ಇಲಾಖೆಗೆ ಸಂಬಂಧಿಸಿದ ವಿಷಯ. | ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಹಾಗೂ ವಾರ್ಡ್ ಮಟ್ಟದ ಕಾರ್ಯದರ್ಶಿಗಳು ಸಭೆಯನ್ನು ಕುರಿತು ಮಾತನಾಡುತ್ತಾ, ಕೆ.ಆರ್.ಮಾರ್ಕೆಟ್ ನಲ್ಲಿ ಹಸಿ ತ್ಯಾಜ್ಯಕ್ಕೆ ಡಂಪಿಂಗ್ ಯಾರ್ಡ್‌ನ್ನು ನಿರ್ಮಿಸುವುದರಿಂದ ಜಾನುವಾರುಗಳಿಗೆ ಆಹಾರ ದೊರಕುತ್ತದೆಂದು ಸಭೆಯಲ್ಲಿ ಸದರಿ ವಿಷಯದ ಕುರಿತು ಚರ್ಚಿಸಿದರು. ಮುಂದುವರೆದು ಸದರಿ ವಿಷಯದ ಕುರಿತು, ಸಭೆಯಲ್ಲಿ ಹಾಜರಿದ್ದ ಸದರಿ ಅಧಿಕಾರಿಗಳು ಕೂಡಲೇ ಸಮಸ್ಯೆಗೆ ಪರಿಹಾರ ನೀಡಾಲಾಗುವುದೆಂದು ಸಭೆಯಲ್ಲಿ ತಿಳಿಸಿದರು. |
| 3. | ಪಾದಾಚಾರಿ ರಸ್ತೆ ಮಾರ್ಗವನ್ನು ತೆರವುಗೊಳಿಸಲು ಕೋರಿ. | ವಾರ್ಡ್ ವ್ಯಾಪ್ತಿಯಲ್ಲಿ ಕೆ.ಆರ್.ಪುರ ಸರ್ಕಾರಿ ಆಸ್ಪತ್ರೆಯ ಮುಂಭಾಗದಲ್ಲಿರುವ ಪಾದಾಚಾರಿ ಮಾರ್ಗವನ್ನು ಬೀದಿ ವ್ಯಾಪಾರಿಗಳು ಒತ್ತುವರಿ ಮಾಡಿಕೊಂಡಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದರಿಂದ ತುರ್ತಾಗಿ ತೆರವುಗೊಳಿಸಲು ಕೇಳಿದರು. ಸಭೆಯಲ್ಲಿ ಹಾಜರಿದ್ದ ಸದರಿ ಅಧಿಕಾರಿಗಳು ಕೂಡಲೇ ಸಮಸ್ಯೆ ಪರಿಹರಿಸುವುದಾಗಿ ತಿಳಿಸಿದರು. |

| | | |
|---|---|---|
| 4. | ದ್ವಿಚಕ್ರ ವಾಹನದ ಟ್ರಾಕ್‌ನ್ನು ನಿರ್ಮಿಸುವಂತೆ. | ವಾರ್ಡ್ ಸಂಖ್ಯೆ 86 ಕೋಲಾರ-ಬೆಂಗಳೂರು ಮುಖ್ಯ ರಸ್ತೆಯ ಸರ್ವಿಸ್ ರಸ್ತೆಯಲ್ಲಿ ದ್ವಿಚಕ್ರ ವಾಹನಗಳನ್ನು ಚಲಾಯಿಸಲು ಅನುಕೂಲವಾಗುವಂತೆ ಐಟಿಐ ಗೇಟ್‌ನಿಂದ ಹೊಸ ಪೊಲೀಸ್ ಠಾಣೆಯ ಕ್ರಾಸ್‌ವರೆಗೆ ಪ್ರತ್ಯೇಕ ದ್ವಿಚಕ್ರ ವಾಹನದ ಟ್ರಾಕ್‌ನ್ನು ನಿರ್ಮಿಸುವಂತೆ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು. ಮುಂದುವರೆದು ಸದರಿ ವಿಷಯದ ಕುರಿತು ಸಭೆಯಲ್ಲಿ ಹಾಜರಿದ್ದ ಸದರಿ ಅಧಿಕಾರಿಗಳು ಕ್ರಮ ಕೈಗೊಳ್ಳಲಾಗುವುದೆಂದು ಸಭೆಯಲ್ಲಿ ತಿಳಿಸಿದರು. |
| 5. | ಪಾದಚಾರಿ ಮಾರ್ಗವನ್ನು ಅಳವಡಿಸುವ ಬಗ್ಗೆ. | ಐ.ಟಿ.ಐ ಸಂಸ್ಥೆಗೆ ಒಳಪಟ್ಟಿರುವ ಕೆ.ಆರ್.ಪುರ ದಿಂದ ಶಾಲೆಗೆ ಮಕ್ಕಳು ಹೋಗಿ ಮತ್ತು ಬರಲು ಈ ಮುಂಚೆ ಐ.ಟಿ.ಐ ನ ಗೇಟ್‌ನ್ನು ತೆರವುಗೊಳಿಸುವಂತೆ ಸಭೆಯಲ್ಲಿ ತಿಳಿಸಿದರು. |
| 6. | ಸ್ವಾಲ್‌ಗಳನ್ನು ತೆರವುಗೊಳಿಸುವಂತೆ. | ಕೆ.ಆರ್.ಪುರ ವ್ಯಾಪ್ತಿಯ ಸಾರ್ವಜನಿಕರ ಶೌಚಾಲಯದ ಬಳಿ ಸ್ವಾಲ್‌ಗಳನ್ನು ಅಳವಡಿಸಿದ್ದು, ಕೂಡಲೇ ತೆರವುಗೊಳಿಸುವಂತೆ ಸಭೆಯಲ್ಲಿ ತಿಳಿಸಿದರು. ಸದರಿ ವಿಷಯದ ಕುರಿತು ಸಭೆಯಲ್ಲಿ ಹಾಜರಿದ್ದ ವಾರ್ಡ್ ಅಭಿಯಂತರರು ಕ್ರಮ ಕೈಗೊಳ್ಳಲಾಗುವುದೆಂದು ಸಭೆಯಲ್ಲಿ ತಿಳಿಸಿದರು. |

ವಾರ್ಡ್ ಕಮಿಟಿ ನೋಡಲ್ ಅಧಿಕಾರಿ ಮತ್ತು ಕಾರ್ಯದರ್ಶಿಗಳು, ನೌಕರರು, ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಈ ಮೇಲ್ಕಂಡಂತೆ ತಿಳಿಸಿರುವ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಹಾಗೂ ನಿರ್ಣಯಗಳಂತೆ ಕೆ.ಆರ್.ಪುರ ವಾರ್ಡ್ ನಂ: 86 ವ್ಯಾಪ್ತಿಯಲ್ಲಿ ಕೆಲಸ ಕಾರ್ಯಗಳನ್ನು ಆಧ್ಯತೆ ಮೇರೆಗೆ ನಿರ್ವಹಿಸಲು ನಿರ್ಣಯಿಸಲಾಯಿತು.

ಕೆ.ಆರ್.ಪುರ ವಾರ್ಡ್ ನಂ: 86 ರ ವಾರ್ಡ್ ಕಮಿಟಿಯ ಕಾರ್ಯದರ್ಶಿಗಳಾದ ಸಹಾಯಕ ಅಭಿಯಂತರರು, ರವರು ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಕಾರ್ಯನಿರ್ವಹಿಸಲು ಕೋರುತ್ತಾ, ವಂದನಾರ್ಪಣೆಯನ್ನು ಸಲ್ಲಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ನಂ: 86